# ಕರ್ನಾಟಕ ವಿಧಾನ ಪರಿಷತ್ತು
## (ಶೂನ್ಯವೇಳೆ ಸೂಚನೆಗಳು )

**ವಿಷಯ: ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ವಿ ಸಂಕನೂರ ಇವರು "ಇತ್ತೀಚೆಗೆ ಸುವರ್ಣ ಟಿ.ವಿ.ಯಲ್ಲಿ ಅಜಿನೋಮೋಟೊ ಕುರಿತು ಪ್ರಸಾರವಾಗಿರುವಂತೆ ಪೋಷಕರೇ ಎಚ್ಚರ! ನಾಲಿಗೆಗೆ ರುಚಿ ಇದೆ ಅಂತಾ ಫಾಸ್ಟ್‌ಫುಡ್ ತಿಂದರೇ ಅಪಾಯ ಕಟ್ಟಿಟ್ಟಬುತ್ತಿ. ರಾಜ್ಯದ ಎಲ್ಲಾ ಜಿಲ್ಲೆಗಳ ಬೀದಿಬದಿ ಮತ್ತು ಫಾಸ್ಟ್ ಫುಡ್ ಸೆಂಟರ್‌ನಲ್ಲಿ ತಯಾರಿಸುವ ಎಗ್‌ರೈಸ್, ನೂಡಲ್ಸ್, ಗೋಬಿ ಇತ್ಯಾದಿ ಆಹಾರ ಪದಾರ್ಥಕ್ಕೆ ರುಚಿ ಬರುವಂತೆ ಅಪಾಯಕಾರಿ ಅಜಿನೋಮೋಟೊ ಅನಧಿಕೃತವಾಗಿ ಬಳಸುತ್ತಿದ್ದಾರೆ. ಇದರಿಂದ ಹಾರ್ಟ್, ಕಿಡ್ನಿ, ಲಿವರ್ ಇದಕ್ಕೆ ಅಪಾಯವಾಗಲಿರುವುದು ಮತ್ತು ಚಿಕ್ಕಮಕ್ಕಳು ಹಾಗೂ ಗರ್ಭಿಣಿ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.**

**ಇಂತಹ ಅಜಿನೋಮೋಟೊ ಒಂದು ಕೆ.ಜಿ.ಗೆ 170ರಂತೆ ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದಾರೆ. ಆದರೆ FSSAI ಕಂಪನಿಯಿಂದ ಪ್ರಮಾಣೀಕೃತ ಹೊಂದಿದ ಅಜಿನೋಮೋಟ ಮಾತ್ರ ಮಾರಾಟಕ್ಕೆ ಅವಕಾಶವಿದೆ. ಆದರೂ ನಿಯಮ ಮೀರಿ ಅನಧಿಕೃತವಾಗಿ ಕಿರಾಣಿ ಅಂಗಡಿಗಳಲ್ಲಿ ಉಪ್ಪಿನಂತೆ ಮಾರುತ್ತಿರುವರು. ಈ ಕುರಿತು ಇತ್ತೀಚೆಗೆ ಸುವರ್ಣ ಟಿ.ವಿ.ಯವರು ಸ್ಟಿಂಗ್ ಅಪರೇಷನ್ ಮಾಡಿ ಹಾವೇರಿಯ ಬಹಳಷ್ಟು ಕಿರಾಣಿ ಅಂಗಡಿಯಲ್ಲಿ ಮಾರಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿರುವರು. ಇದನ್ನು ಬ್ಯಾನ್ ಮಾಡಲು ಹಲವಾರು ಬಾರಿ ಪ್ರತಿಭಟನೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಹಿಂದೆ ಅಧಿವೇಶನದಲ್ಲಿ ಮಾಜಿ ಆರೋಗ್ಯ ಸಚಿವರಾದ ರಮೇಶ ಕುಮಾರ ಅಜಿನೋಮೋಟೊ ಬ್ಯಾನ್ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ನೆನಪಿಸಬಹುದು.**

**ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಕಿರಾಣಿ ಅಂಗಡಿ ಮತ್ತು ಫಾಸ್ಟ್‌ಫುಡ್ ಅಂಗಡಿಗಳಲ್ಲಿ ಅಜಿನೋಮೋಟ ನಿಯಮ ಬಾಹಿರವಾಗಿ ಮಾರಾಟ ಮಾಡುವುದನ್ನು ಬ್ಯಾನ್ ಮಾಡಬೇಕು. ಅದರಂತೆ ಬಳಕೆಗೆ ಮಾರ್ಗಸೂಚಿಗಳಿದ್ದರೂ ವಿಪರೀತವಾಗಿ ಬಳಕೆ ಮಾಡುವುದನ್ನು ನಿಲ್ಲಿಸಬೇಕು. ಈ ಕುರಿತು ಆರೋಗ್ಯ ಇಲಾಖೆ ಮತ್ತು ಪೋಲಿಸ್ ಇಲಾಖೆಯವರು ಜಂಟಿಯಾಗಿ ಆರೋಗ್ಯಕ್ಕಾಗಿ ಮಾರಕವಾಗಿರುವ ಅಜಿನೋಮೋಟೊ ಪದಾರ್ಥ ಮಾರಾಟವಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಿ ಜನರ ಆರೋಗ್ಯ ಕಾಪಾಡಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಗೃಹ ಇಲಾಖೆಯನ್ನು ಒತ್ತಾಯಿಸುವ ಕುರಿತು ಶೂನ್ಯವೇಳೆಯ ಪ್ರಸ್ತಾವಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

ಇತ್ತೀಚೆಗೆ ಸುವರ್ಣ ಟಿ.ವಿ.ಯಲ್ಲಿ ಅಜಿನೋಮೋಟೊ ಕುರಿತು ಕಾರ್ಯಕ್ರಮವು ಪ್ರಸಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಬೀದಿಬದಿ ಮತ್ತು ಫಾಸ್ಟ್‌ಫುಡ್ ಸೆಂಟರ್‌ನಲ್ಲಿ ತಯಾರಿಸುವ ಎಗ್‌ರೈಸ್, ನೂಡಲ್ಸ್, ಗೋಬಿ ಇತ್ಯಾದಿ ಆಹಾರ ಪದಾರ್ಥಕ್ಕೆ ರುಚಿ ಬರುವಂತೆ ಅಜಿನೋಮೋಟೊ ಸೇರಿಸಿ ತಯಾರಿಸುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಅಜಿನೊಮೋಟೋ ಅಥವಾ ಮಾನೋ ಸೋಡಿಯಂ ಗ್ಲೂಟಾಮೇಟ್ ಪದಾರ್ಥವನ್ನು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ನಿಷೇಧಿಸಿರುವುದಿಲ್ಲ. ಈ ಪದಾರ್ಥವನ್ನು ಹಾಲು, ಗೋಧಿ, ತರಕಾರಿಗಳು ಮತ್ತು ಸಾಂಬಾರ ಪದಾರ್ಥಗಳೂ ಸೇರಿದಂತೆ ಹಲವು ಆಹಾರ ಪದಾರ್ಥಗಳು ಸ್ವಾಭಾವಿಕವಾಗಿ ಒಳಗೊಂಡಿರುತ್ತವೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ನಿಬಂಧನೆಗಳು 2011ರ ನಿಯಮ 3.1 (Food Product Standards and Food Additives)ರಂತೆ ಅಜಿನೊಮೋಟೋ ಅಥವಾ ಮಾನೋ

Scanned with OKEN Scanner

ಸೋಡಿಯಂ ಗ್ಲೂಟಾಮೇಟ್ ಪದಾರ್ಥವನ್ನು (A flavor enhancer bearing INS number 621) ಕೆಲವೊಂದು ಆಹಾರ ಪದಾರ್ಥಗಳಲ್ಲಿ ಬಳಸಲು ಸದರಿ ನಿಯಮದ ಅನುಬಂಧ-ಎರಲ್ಲಿ ಅವಕಾಶವಿರುತ್ತದೆ. ಆದರೆ ಸದರಿ ಪದಾರ್ಥವನ್ನು 12 ತಿಂಗಳ ಒಳಗಿನ ಶಿಶುಗಳಿಗೆ ನೀಡುವ ಆಹಾರವೂ ಸೇರಿದಂತೆ ಕೆಲವು ಆಹಾರಗಳಲ್ಲಿ ಬಳಸಲು ಅವಕಾಶವಿರುವುದಿಲ್ಲ.

ಅಜಿನೊಮೋಟೋ ಅಥವಾ ಮಾನೋ ಸೋಡಿಯಂ ಗ್ಲೂಟಾಮೇಟ್ ಪದಾರ್ಥವನ್ನು ಪ್ಯಾಕ್ ಮಾಡಲಾದ ಆಹಾರದ ಉತ್ಪಾದನೆಗೆ ಬಳಸಿದ್ದಲ್ಲಿ ಸದರಿ ಪೊಟ್ಟಣದ ಮೇಲೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ನಿಬಂಧನೆಗಳು 2011ರ ನಿಯಮ 2.4.5 (18) (Packaging and Labelling)ರಂತೆ ಪ್ಯಾಕ್‌ನ ಲೇಬಲ್‌ನ ಮೇಲೆ ಘೋಷಣೆಯನ್ನು ಮಾಡಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅಜಿನೊಮೋಟೋ ಅಥವಾ ಮಾನೋ ಸೋಡಿಯಂ ಗ್ಲೂಟಾಮೇಟ್ ಪದಾರ್ಥವನ್ನು ಉಪಯೋಗಿಸುತ್ತಿರುವ ಬೀದಿಬದಿ ವ್ಯಾಪಾರಿಗಳು ಮತ್ತು ಫಾಸ್ಟ್ ಫುಡ್ ಸೆಂಟರ್ ಉದ್ದಿಮೆದಾರರ ಮೇಲೆ ಯಾವುದೇ ಪ್ರಕರಣ ದಾಖಲಿಸದೇ ಅದನ್ನು ಹೆಚ್ಚಾಗಿ ಉಪಯೋಗಿಸದಂತೆ ಅರಿವು ಮೂಡಿಸಲಾಗುತ್ತಿದೆ.

ಸಂಬಂಧಿಸಿದಂತೆ, ಹಾವೇರಿ ಜಿಲ್ಲೆಯಲ್ಲಿ ಬೀದಿಬದಿ ವ್ಯಾಪಾರಿಗಳು ಮತ್ತು ಫಾಸ್ಟ್ ಫುಡ್ ಸೆಂಟರ್‌ಗಳಲ್ಲಿ ಪರಿಶೀಲಿಸಿದಾಗ ಅಲ್ಲಿ ಎಫ್.ಎಸ್. ಎಸ್.ಎ.ಐದಿಂದ ಪ್ರಮಾಣೀಕೃತ ಅಜಿನೊಮೋಟೋ ಅಥವಾ ಮಾನೋ ಸೋಡಿಯಂ ಗ್ಲೂಟಾಮೇಟ್ ಉಪಯೋಗಿಸುತ್ತಿರುವುದು ಕಂಡು ಬಂದಿದ್ದು, ಸದರಿ ಪದಾರ್ಥವನ್ನು ಹೆಚ್ಚಾಗಿ ಉಪಯೋಗಿಸದಂತೆ ದಿನಾಂಕ:01.01.2023 ರಿಂದ ಇಲ್ಲಿಯವರೆಗೂ 112 ಬೀದಿ ಬದಿ ಅಂಗಡಿ ಮತ್ತು ಫಾಸ್ಟ್ ಫುಡ್ ಸೆಂಟರ್‌ಗಳಿಗೆ ಭೇಟಿ ನೀಡಿ ಅರಿವು ಮೂಡಿಸಲಾಗಿದೆ.

**ಆಕುಕ / ಶೂನ್ಯವೇಳೆ ಸೂಚನೆ/2023**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

Scanned with OKEN Scanner